

ನನಗೆ ‘ವರಿ’ ಮಾಡತೊಡಗಿದವು. ಹೀಗೆ ನೋವು ಬಂದಾಗ ಆ ಜಾಗಗಳಲ್ಲಿ ಬೇಸಿಗೆಯ ಬಿಸಿಗಾಳಿ ಸಂಚರಿಸಿದಂತೆ ವೇದನೆಯಾಗುತ್ತಿತ್ತು. ಒಮ್ಮೆ ನನಗೆ ವಿಪರೀತವಾಗಿ ಎದೆ ನೋವು ಬಂದು ಬಿಟ್ಟಿತು. ತಡೆದುಕೊಳ್ಳಲಾಗದೆ ಮನೆಯವರಿಗೆ ಹೇಳಿದೆ – ‘ಹೃದಯಾಘಾತವೇನಾದರೂ...?’ ನನ್ನ ಮಗ, ‘ಓಹ್, ನಿನಗೂ ಹೃದಯವಿದೆಯೆಂದಾಯಿತು! ನಡಿ’ ಎಂದು ಜಯದೇವ ಆಸ್ಪತ್ರೆಗೆ ಕರೆದುಕೊಂಡು ಹೋದ. ಅಲ್ಲಿ ವೈದ್ಯರು ಇ.ಸಿ.ಜಿ. ಮಾಡಿ, ‘ಸದ್ಯಕ್ಕೆ ಏನೂ ತೊಂದರೆ ಕಾಣುತ್ತಿಲ್ಲ. ಅಬ್ಸರ್‌ವೇಷನ್‌ಗೆ ಒಂದೆರಡು ದಿವಸ ಇರಲಿ’ ಎಂದು ಆಸ್ಪತ್ರೆಯಲ್ಲೇ ಇಟ್ಟುಕೊಂಡರು. ಒಂದು ಹತ್ತು ಸಲ ರಕ್ತ ತೆಗೆದುಕೊಂಡರು. ನಾನು ರಕ್ತಹೀನ